(ಸಾಕ್ಷಿಯನ್ನು ಈ ದಿನ ದಿನಾಂಕ. **28–06–2023** ರಂದು ಕರೆಯಿಸಿ ಪ್ರಮಾಣೀಕರಿಸಲಾಯಿತು.)

ಪಾಟೀಸವಾಲು ಃ **1** ನೇ ಪ್ರತಿವಾದಿ ಪರ ಶ್ರೀ ಬಿ ಸಿ ಕೆ ವಕೀಲರಿಂದ

**1.** ಗೊಲಗೇರಿ ಜಿಲ್ಲಾ ಪಂಚಾಯಿತಿ ಕ್ಷೇತ್ರಕ್ಕೆ ನಾನು ಸದಸ್ಯ ಸ್ಥಾನಕ್ಕೆ ನಾನು ಎರಡು ಬಾರಿ ನಾನು ಪರಾಜಿತನಗೊಂಡಿರುತ್ತೇನೆ ಎಂದರೆ ಸರಿ. ನನ್ನ ಮಗ ಸುನೀಲ ಗೊಲ್ಲಾಳಪ್ಪಗೌಡ ಪಾಟೀಲ ಈತ ಈಗ ಗೊಲಗೇರಿ ಗ್ರಾಮ ಪಂಚಾಯಿತಿ ಅಧಕ್ಷ ಎಂದರೆ ಸರಿ. ನಾನು ಸಿಂದಗಿ ತಾಲೂಕನ ಜೆ ಡಿ ಎಸ್ ಪ್ರಾದೇಶಿಕ ಪಕ್ಷದ ಅಧ್ಯಕ್ಷ ಆಗಿದ್ದೆ ಎಂದರೆ ಸರಿ. **1** ನೇ ಪ್ರತಿವಾದಿಗೆ ಎರಡು ಹೆಣ್ಣು ಒಂದು ಗಂಡು ಒಟ್ಟು ಮೂರು ಜನ ಮಕ್ಕಳು ಇರುತ್ತಾರೆ. **1** ನೇ ಪ್ರತಿವಾದಿಗೆ ಮೂರು ಹೆಣ್ಣು ಮಕ್ಕಳು ಹಾಗೂ ಎರಡು ಗಂಡು ಮಕ್ಕಳು ಈ ರೀತಿ ಒಟ್ಟು ಐದು ಮಕ್ಕಳು ಎಂಬ ಪ್ರಶ್ನೆಗೆ ಸಾಕ್ಷಿ ನನಗೆನಿ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. **1** ನೇ ಪ್ರತಿವಾದಿ ಗಂಡ ಬಸಪ್ಪ ಬದುಕಿರುತ್ತಾನೆ. ಗೊಲಗೇರಿ ಗ್ರಾಮದ ಸರ್ವೆ ನಂ.**84** ಒಟ್ಟು ಕ್ಷೇತ್ರ ನನಗೆ ಗೊತ್ತಿರುವದಿಲ್ಲ**,** ಆದರೆ ಸರ್ವೆ ನಂ.**84/2** ಕ್ಷೇತ್ರ **4** ಎಕರೆ **4** ಗುಂಟೆ ಇರುತ್ತದೆ. ದಾವಾ ಸ್ವತ್ತಿನ ಮೂಲ ಮಾಲಿಕರು **1** ನೇ ಪ್ರತಿವಾದಿ ಆಗಿರುತ್ತಾಳೆ. **1** ನೇ ಪ್ರತಿವಾದಿಗೆ ದಾವಾ ಸ್ವತ್ತು ಯಾವ ರೀತಿ ಬಂದಿರುತ್ತದೆ ಎಂದು ನನಗೆ ಮಾಹಿತಿ ಇಲ್ಲ. ದಾವಾ ಸ್ವತ್ತಿನ ಸಂಬಂಧಪಟ್ಟಂತೆ ಯಾವದೆ ದಾಖಲಾತಿ ನಾನು ಪರಿಶೀಲನೆ ಮಾಡಿರುವದಿಲ್ಲ. ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ಆಕಾರ ಬಂದ**,** ಪಿಟಿ ಶೀಟ**, 11** ಇ ಸ್ಕೆಚ್ಚ ಹಾಗೂ ಇತರ ದಾಖಲಾತಿಗಳನ್ನು ನ್ಯಾಯಾಲಯಕ್ಕೆ

ಹಾಜರಪಡಿಸಿರುವದಿಲ್ಲ. ದಾವಾ ಸ್ವತ್ತು **2013** ನೇ ಸಾಲಿನಲ್ಲಿ ಎಷ್ಟು ಬೆಲೆಬಾಳುತ್ತಿತ್ತು ಎಂದು ನನಗೆ ಮಾಹಿತಿ ಇಲ್ಲ.

**2.** ದಿಃ **14–5–2013** ರಂದು **1** ನೆ ಪ್ರತಿವಾದಿ ಮತ್ತು ಇತರೇ ಗ್ರಾಮದ ವ್ಯಕ್ತಿಗೆ ನನ್ನ ಮನೆಗೆ ದಾವಾ ಸ್ವತ್ತು ಮಾರಾಟ ಮಾಡುತ್ತಿದ್ದೇವೆ ನನಗೆ ಖರೀದಿಸಲು ಕೋರಿದ್ದರು. ದಾವಾ ಸ್ವತ್ತಿನ ವ್ಯವಹಾರ ಗೊಲಗೇರಿ ನಮ್ಮ ಮನೆಯಲ್ಲಿ ನಡೆದಿರುತ್ತದೆ. ದಿನಾಂಕಃ **14–5–2013** ರಂದು ದಾವಾ ಸ್ವತ್ತಿನ ವ್ಯವಹಾರ ನನ್ನ ಮನೆಯಲ್ಲಿ ಬೆಳಿಗ್ಗೆ **11–00** ಗಂಟೆಯಿಂದ ಮಧ್ಯಾಹ್ನ **2–00** ಗಂಟೆ ವರೆಗೆ ನಡೆದಿರುತ್ತದೆ. ಪ್ರತಿವಾದಿ ನನ್ನಿಂದ ಪಡೆದ ಸಾಲದ ಭದ್ರತೆಗಾಗಿ ನಿಪಿ.**1** ನ್ನು ಬರೆದುಕೊಟ್ಟಿರುತ್ತಾರೆ ಎಂದರೆ ಸರಿ ಅಲ್ಲ. ಪ್ರತಿವಾದಿ ನನ್ನಿಂದ **1** ಲಕ್ಷ ಹಣ ತಿಂಗಳಿಗೆ ಶೇ **1** ರಂತೆ ಬಡ್ಡಿ ಕರಾರಿಗೆ ಒಪ್ಪಿಕೊಂಡು ಸಾಲ ಪಡೆದಿದ್ದಳು ಎಂದರೆ ಸರಿ ಅಲ್ಲ. ಅದರಂತೆ **1** ನೇ ಪ್ರತಿವಾದಿ **2013** ರಿಂದ **2020** ಡಿಸೆಂಬರ ವರೆಗೆ ತಾನು ಪಡೆದ ಸಾಲಕ್ಕೆ ಬಡ್ಡಿ ನೀಡುತ್ತಾ ಬಂದಿರುತ್ತಾಳೆ ಎಂದರೆ ಸರಿ ಅಲ್ಲ. ಡಿಸೆಂಬರ **2020** ರಲ್ಲಿ **1** ನೇ ಪ್ರತಿವಾದಿ ನನ್ನಿಂದ ಪಡೆದ ಸಂಪೂರ್ಣ ಹಣ ಮರು ಪಾವತಿ ಮಾಡಿರುತ್ತಾಳೆ ಎಂದರೆ ಸರಿ ಅಲ್ಲ. **2014** ರಿಂದ **2020** ರವರೆಗೂ ಪ್ರತಿವಾದಿ ತಾನು ಪಡೆದ ಸಾಲದ ಅಸಲು ಪಡೆದು ನಿಪಿ.**1** ನ್ನು ರದ್ದುಪಡಿಸುವಂತೆ ಕೋರುತ್ತಾ ಬಂದಿರುತ್ತಾಳೆ ಎಂದರೆ ಸರಿ ಅಲ್ಲ. **2013** ರಿಂದ **2020** ರವೆಗೂ **1** ನೇ ಪ್ರತಿವಾದಿಗೆ ನಿಪಿ.**1** ರಂತೆ ಕ್ರಯ ಪತ್ರ ಬರೆಯುವಂತೆ ನಾನು ಯಾವದೇ ನೋಟೀಸ ನೀಡಿರುವದಿಲ್ಲ.

ದಾವಾ ಸ್ವತ್ತು ಎರಿ ಮತ್ತು ಸವಳು ಮಣ್ಣಿನ ಮಿಶ್ರಿತವಾದ ಮಣ್ಣಿನಿಂದ ಕೂಡಿರುತ್ತದೆ. ಗೊಲಗೇರಿ ಗ್ರಾಮದ ಸರ್ವೆ ನಂ.**84** ಕ್ಷೇತ್ರ ಒಟ್ಟು **19** ಎಕರೆ **14** ಗುಂಟೆ ಉಳ್ಳದ್ದಾಗಿರುತ್ತದೆ ಎಂದರೆ ಸಾಕ್ಷಿ ನನಗೆ ಮಾಹಿತಿ ಇಲ್ಲ ಎಂದು ಹೇಳುತ್ತಾರೆ. ಒಟ್ಟು **19** ಎಕರೆ **14** ಗುಂಟೆ ಜಮೀನಿನಲ್ಲಿ ದಾವಾ ಸ್ವತ್ತು ಯಾವ ಭಾಗಕ್ಕೆ ಇರುತ್ತದೆ ಎಂದು ನನಗೆ ಮಾಹಿತಿ ಇರುವದಿಲ್ಲ. ದಾವಾ ಸ್ವತ್ತಿನ ಪೂರ್ವಕ್ಕೆ ಬಸಪ್ಪ ಶಾಮಣ್ಣ ವಾಲಿಕಾರ ಇವರ ಜಮೀನು**,** ಪಶ್ಚಿಮಕ್ಕೆ ಕೆನಾಲ **,** ಉತ್ತರಕ್ಕೆ ಗೌಡರ ಆಸ್ತಿ ಇರುತ್ತದೆ ಹಾಗೂ ದಕ್ಷಿಣಕ್ಕೆ ಅಬ್ದುಲಸಾಬ ಬಾಗವಾನ ಈತನ ಜಮೀನು ಇರುತ್ತದೆ. ದಾವಾ ಸ್ವತ್ತು **2013** ರಲ್ಲಿ **7** ಲಕ್ಷ ಬೆಲೆಬಾಳುತ್ತಿತ್ತು ಎಂದರೆ ಸರಿ ಅಲ್ಲ. ದಾವಾ ಸ್ವತ್ತಿಗೆ ಸಂಬಂಧಿಸಿದಂತೆ **1** ನೇ ಪ್ರತಿವಾದಿಗೆ ಹಾಗೂ ಅವರ ಕುಟುಂಬದ ಸದಸ್ಯರ ಪ್ರಶ್ನೆಗೆ ಯಾವದೇ ವಾಟ್ನಿ ಆಗಿಲ್ಲ ಎಂಬ ಪ್ರಶ್ನೆಗೆ ನನಗೆ ಮಾಹಿತಿ ಇರುವದಿಲ್ಲ ಎಂದು ಹೇಳುತ್ತಾರೆ. ದಾವಾ ಸ್ವತ್ತಿನಿಂದ ಬರುವ ಆದಾಯದಿಂದ **1** ನೇ ಪ್ರತಿವಾದಿ ಕುಟುಂಬ ನಿರ್ವಹಣೆ ಆಗುತ್ತದೆ ಎಂಬ ಪ್ರಶ್ನೆಗೆ ಸಾಕ್ಷಿ ನನಗೆ ಮಾಹಿತಿ ಇಲ್ಲ ಎಂದು ಹೆಳುತ್ತಾರೆ. **1** ನೆ ಪ್ರತಿವಾದಿ ಅನಕ್ಷರಸ್ಥಳು ಎಂಬ ಬಗ್ಗೆ ನನಗೆ ಮಾಹಿತಿ ಇರುವದಿಲ್ಲ. **1** ನೇ ಪ್ರತಿವಾದಿಗೆ ಕಿವಿ ಕೇಳುವದಿಲ್ಲ ಎಂದರೆ ಸಾಕ್ಷಿ ನನಗೆ ಮಾಹಿತಿ ಇಲ್ಲ ಎಂದು ಹೇಳುತ್ತಾರೆ. **1** ನೇ ಪ್ರತಿವಾದಿ ಮಾನಸಿಕವಾಗಿ ಅಸ್ವಸ್ಥಳು ಇರುತ್ತಾಳೆ ಎಂದರೆ ಸರಿ ಅಲ್ಲ.

**3.** ಗೊಲಗೇರಿ ಗ್ರಾಮದ ಸರ್ವೆ ನಂ.**84/1** ರಲ್ಲಿ **15** ಎಕರೆ **10** ಗುಂಟೆ ಜಮೀನನ್ನು ನನ್ನ ಮಗ ಸುನೀಲ ಪಾಟೀಲ ಈತನ ಹೆಸರಿಗೆ **2013** ರಲ್ಲಿ ಪ್ರತಿವಾದಿ ಗಂಡನಿಂದ ಕಾನೂನು ಬಾಹಿರವಾಗಿ ಖರೀದಿ ಮಾಡಿಸಿರುತ್ತೇನೆ ಎಂದರೆ ಸಾಕ್ಷಿ ನನಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ಗೊಲಗೇರಿ ಗ್ರಾಮದ ಕಂಬಾರ ಎಂಬ ಹೆಣ್ಣುಮಗಳ ಮೇಲೆ ನಾನು ದೌರ್ಜನ್ಯ ಮಾಡಿದ್ದಕ್ಕೆ ಕಲಕೇರಿ ಪೊಲೀಸ ಠಾಣೆಯಲ್ಲಿ ದೂರು ಸಲ್ಲಿಸಿದ್ದರು ಎಂದರೆ ಸರಿ. ಕಲಕೇರಿ ಗುನ್ನಾ ನಂ. **71/2022** ರಂತೆ ಪ್ರಕರಣ ದಾಖಲ ಆಗಿರುತ್ತದೆ ಎಂದರೆ ಸರಿ ಅಲ್ಲ . ಸದರಿ ಪ್ರಕರಣದಲ್ಲಿ ನಾನು ನಿರೀಕ್ಷಣಾ ಜಾಮೀನು ಪಡೆದಿರುವದಿಲ್ಲ. ನನ್ನ ಮಗ ಸುನೀಲ ಪಾಟೀಲ ಈತನು ಅಸಲ ದಾವಾ ನಂ.**8/2018** ನ್ನು ಈರಪ್ಪಾ ಕಾಂಬಳೆ ಇವರ ವಿರುದ್ಧ ಹಾಕಿಸಿರುತ್ತೇನೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸಿಸಿ ನಂ.**202/2019** ಸಂತೋಷ ಕರನಾಳ ಈತನ ಮೇಲೆ ಸಲ್ಲಿಸಿರುತ್ತೇನೆ ಎಂದರೆ ಸರಿ ಅಲ್ಲ. ಪ್ರತಿವಾದಿಯರು ಆರ್ಥಿಕವಾಗಿ ಬಡವರು ಎಂದರೆ ಸರಿ ಅಲ್ಲ. ನಿಪಿ.**1** ನ್ನು **1** ನೇ ಪ್ರತಿವಾದಿ ತಾನು ಪಡೆದ ಸಾಲಕ್ಕೆ ಭದ್ರತೆಗಾಗಿ ಬರೆದುಕೊಟ್ಟಿರುತ್ತಾಳೆ ಎಂದರೆ ಸರಿ ಅಲ್ಲ. ಅಕ್ರಮವಾಗಿ ದಾವಾಸ್ವತ್ತನ್ನು ಪ್ರತಿವಾದಿಯರಿಂದ ಪಡೆಯಲು ನಿಪಿ.**1** ನ್ನು ದುರುಪಯೋಗಪಡಿಸಿಕೊಂಡು ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿ ಅಲ್ಲ. ಪ್ರತಿವಾದಿ ಯಾವದೇ ಸಮಯದಲ್ಲಿ ದಾವಾ ಸ್ವತ್ತನ್ನು ಮಾರಾಟ ಮಾಡಲು ಒಪ್ಪಿ ನಿಪಿ.**1** ನ್ನು ಬರೆದುಕೊಟ್ಟಿಲ್ಲ ಎಂದರೆ ಸರಿ ಅಲ್ಲ. ದಾವಾದಲ್ಲಿ ಕೇಳಿದ ಪರಿಹಾರ

ಕೇಳಲು ನಾನು ಅರ್ಹ ಅಲ್ಲ ಎಂದರೆ ಸರಿ ಅಲ್ಲ. ಸುಳ್ಳು ವಾದ ಹಾಗೂ ಪ್ರಮಾಣ ಪತ್ರ ಸಲ್ಲಿಸಿ ಖೊಟ್ಟಿ ದಾಖಲಾತಿ ಹಾಜರಪಡಿಸಿ ಸುಳ್ಳು ಸಾಕ್ಷಿ ಹೆಳುತ್ತಿದ್ದೇನೆ ಎಂದರೆ ಸರಿ ಅಲ್ಲ.

ಮರು ವಿಚಾರಣೆ ಃ ಇಲ್ಲ

(ಸಾಕ್ಷಿಯ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸರಿ ಅದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ವ

ಜೆ ಎಂ ಎಫ್ ಸಿ, ಸಿಂದಗಿ.